ವಿಶಾಲವಾಗಿ ಹರಡಿಕೊಂಡಿದೆ. ಬಂದು ಸೇರಿಕೊಂಡ ಮನೆಯಲ್ಲಿ ಮನೆಯ ಬಗಲಲ್ಲಿಯೇ ಗದ್ದೆ ತೋಟಗಳು ಅವರಿಗೆ ಇವೆಯೆಂದು ಅಮ್ಮ ಹೇಳಿದ್ದಳು. ಆದರೂ ನಾನು ಹೋಗಿ ನೋಡಿರಲಿಲ್ಲ. ಅಪ್ಪತ್ತಾ ಕರೆದರಲ್ಲವೇ. ಅವರಿಗೇ ಅಲ್ಲಿ ಹೋಗಿರಲು ಸಾಧ್ಯವಿಲ್ಲ ಎಂದೇ ಅನಿಸುತ್ತದೆ. ಅವರಿಗೆ ಊರೂರಿಗೆ ಹೋಗಿಬರಲೇ ಸಮಯ ಸಾಲದು.

ಊರಿಂದ ಬಂದು ಬಸ್ಸಿಳಿದ ತಕ್ಷಣ ನಮ್ಮ ಮನೆಯೇ ಮೊದಲಲ್ಲಿ ಇರುವುದು. ಆದ್ದರಿಂದ ಯಾವ ಊರಿಗೆ ಹೋಗಿ ಬಂದರೂ ಶೆಂಬಾಯಿಅಪ್ಪತ್ತಾ ನಮ್ಮ ಮನೆಗೆ ಮೊದಲು ಬರುವರು. ಬರುವ ಮುನ್ನವೇ ಶೆಂಬಾಯಿಅಪ್ಪತ್ತಾರ ಕಂಚಿನ ದನಿ, ನಂತರ ನವಿರಾದ ಗೋಕುಲ್ ಸ್ಯಾಂಡಲ್ ವಾಸನೆ, ದಟ್ಟವಾದ ಮಲ್ಲಿಗೆಯ ವಾಸನೆ ಬರುವುದು. ಬೆವರಿನ ವಾಸನೆಯೂ ಬೆರೆತು ಬರುವುದು. ಅದು ಯಾವ ಸೋಪು ಬೆರೆತ ವಾಸನೆ ಎಂಬುದನ್ನು ಕಂಡುಹಿಡಿಯಲು ತಿಳಿಯಲಾಗದ್ದು ನನ್ನ ತಪ್ಪಲ್ಲ. ಬೆವರುವ ಮುನ್ನವೇ ಬಿಳಿಯ ಬಣ್ಣದಲ್ಲಿ ಗುಲಾಬಿ ಹೂ ಚಿತ್ರಬಿಡಿಸಿದ ಒಂದು ಪುಟ್ಟ ಟವಲಿನಲ್ಲಿ ಒರೆಸಿಕೊಳ್ಳುವ ವೈಶಿಷ್ಟ್ಯವನ್ನು, ಶೆಂಬಾಯಿಅಪ್ಪತ್ತಾ ಬಳಿಯೇ ಮೊದಲು ನೋಡಿದ್ದು. ಅದು 'ಕರ್ಚೀಫು' ಅಂತೆ. ಅಮ್ಮನೇ ಹೇಳಿದ್ದು. ನನಗೆ ತಿಳಿದಂತೆ ಕರ್ಚೀಫ್ ಇಟ್ಟುಕೊಂಡ ಮೊದಲ ವ್ಯಕ್ತಿ ಶೆಂಬಾಯಿಅಪ್ಪತ್ತಾನೆ. 'ಅಂದ ಮೇಲೆ ನೀನೇಕೆ ಇಟ್ಟುಕೊಳ್ಳಲಿಲ್ಲ?' ಎಂದು ಕೇಳಿದ್ದಕ್ಕೆ ಅಮ್ಮ ಆಗ ಏನೂ ಉತ್ತರ ಕೊಡಲಿಲ್ಲ. ಅಡಿಗೆ ಮನೆಯಲ್ಲಿ ಕೆಲಸ ಮಾಡುವಾಗ ಪಾತ್ರೆಗಳನ್ನು ಒಲೆಯಿಂದ ಇಳಿಸಿಡಲು ತುಂಡು ಬಟ್ಟೆಯೊಂದನ್ನು ಅಮ್ಮನ ಬಳಿ ನೋಡಿರುವೆನು. ಮಿಕ್ಕೆಲ್ಲ ಸಮಯದಲ್ಲಿ ಬೆವರೊರೆಸಿಕೊಳ್ಳಲು ಸೆರಗೇ.

ಒರೆಸಿಕೊಂಡ ಕರ್ಚೀಫ್ ಅನ್ನು ಅವರದೇ ಬೆಡಗಿನಲ್ಲಿ ಮೊದಲಿನಂತೆಯೇ ಮಡಚಿ, ಸೊಂಟದ ಬಳಿ, ಹೊಟ್ಟೆಯ ನಡುವೆ ಸ್ವಲ್ಪ ಗುಳಿಬಿದ್ದ ಜಾಗದಲ್ಲಿ ರೆಪ್ಪೆ ಮಿಟುಕಿಸುವುದರೊಳಗೆ ಸಿಕ್ಕಿಸಿ, ನನ್ನನ್ನು ಮುದ್ದುಮಾಡಿ ತಂದ ತಿಂಡಿಯನ್ನು ಕೊಡುವ ಪ್ರೀತಿಯಲ್ಲಿ ಉಳಿದದ್ದೆಲ್ಲವೂ ಮರೆತುಹೋಗುವುದು. ಅಮ್ಮ ಊಟ ಮಾಡಲು ಹೇಳುವಾಗ 'ಊಟ ಮಾಡಿಕೊಂಡೇ ಬಂದೆ' ಎಂದು ನಿರಾಕರಿಸುವರು. ಅಮ್ಮನಿಗಾಗಿ ಒಂದು ಲೋಟ ನೀರು, ಸ್ವಲ್ಪ ಸಮಯದ ನಂತರ ಕಾಫಿಯನ್ನು ಕುಡಿಯುವರು. ಹೆಬ್ಬೆರಳಿಗೂ ಉಳಿದ ಬೆರಳುಗಳಿಗೂ ನಡುವೆ ಲೋಟವನ್ನು ನಾಜೂಕಾಗಿ ಹಿಡಿದು, ಹವಳದಂತಹ ಕೆಂಪು ತುಟಿಗಳನ್ನು ಒತ್ತಿ ಶಬ್ದ ಮಾಡದೇ ಹೀರುವ ಸೊಗಸಿಗೆ 'ಪಾಲಿಷ್' ಮಾಡಿದ ಬೆರಳ ಉಗುರಿನ ಕೆಂಪು ನಾಚಿಕೊಂಡ ಹೂಗಳಂತೆ ಕಾಣುವುದು. ಒತ್ತಿ ಒತ್ತಿ ತೆಗೆಯುವಾಗ ಲೋಟ ಶೆಂಬಾಯಿಅಪ್ಪತ್ತಾರೊಂದಿಗೆ ಏನೋ ಗುಟ್ಟಾಗಿ ಮಾತನಾಡುವಂತೆ ಕಾಣುವುದು. ಗಮನವಿಟ್ಟು ಕೇಳಲು ಪ್ರಯತ್ನಿಸುವಾಗ, ಅಮ್ಮನೂ ಶೆಂಬಾಯಿಅಪ್ಪತ್ತಾನೂ ಮಾತನಾಡುವುದು ಕಿವಿಗೆ ಬೀಳದೇ ಹೋಗುವುದು. ಎಲ್ಲ ಸ್ವಲ್ಪ ಸಮಯವಷ್ಟೆ. ಚೀಲ ತುಂಬಾ ತುಂಬಿಕೊಂಡು ಬಂದಿರುವುದನ್ನು ಹೊತ್ತು ಹೋಗಲು ಶ್ರಮಪಡುವರು ಶೆಂಬಾಯಿಅಪ್ಪತ್ತಾ ಎಂಬುದಕ್ಕಾಗಿ ನನ್ನನ್ನು ಅವರೊಂದಿಗೆ ಜತೆಯಾಗಿ ಕಳುಹಿಸಿಕೊಡುವಳು ಅಮ್ಮ. ಆಗ ಅಮ್ಮನ ಮುಖ ಅಷ್ಟೊಂದು ಸರಿಯಾಗಿರುತ್ತಿರಲಿಲ್ಲ.

ಶೆಂಬಾಯಿಅಪ್ಪತ್ತಾರೊಂದಿಗೆ ಹೋಗುವುದು ನನಗೆ ತುಂಬಾ ಇಷ್ಟ. ಸ್ಯಾಂಡಲ್ ಪೌಡರೂ ಮಲ್ಲಿಗೆಯ ವಾಸನೆಯೂ ಬೆರೆತ ಅಪ್ಪತ್ತಾರ ಸುಗಂಧ ತಣ್ಣನೆ ಗಾಳಿ ಬೀಸುವ ರಾಮನಾಥ ಚೆಟ್ಟಿಯಾರ್ ತೆಂಗಿನ ತೋಟವನ್ನು ಹಾದುಹೋಗುವಾಗ ಇನ್ನೂ ಹಿತವಾಗಿರುವುದು. ಶೆಂಬಾಯಿಅಪ್ಪತ್ತಾ ಏನೇನನ್ನೋ ನನ್ನ ಬಳಿ ಕೇಳುವರು. ಓದಿನ ಬಗ್ಗೆ, ಊರಲ್ಲಿ ನಡೆದ ವಿಷಯಗಳ ಬಗ್ಗೆ... ಆ ಸಮಯಕ್ಕೆ ಏನೆಲ್ಲಾ ತೋಚುವುದೋ ಅದನ್ನು ಹೇಳುವೆ. ಜ್ಞಾಪಕವಿಲ್ಲ. ಆದರೆ ತಿಂಗಳಲ್ಲಿ ಕೆಲವು ದಿನಗಳು ಈ ಊರಿನಲ್ಲೂ ಹಲವು ದಿನಗಳು ಬೇರೆಯ ಊರುಗಳಿಗೂ